Kanakadāsa

Haribhaktisāravu

1869

ಕ್ತಾಯುಕ್ತ ಪರೀಕ್ಷೆ.

ಸಂಪ್ರಹಾರ, ಸಂ. (ನಾ) ಕಾಳಗ.

ಸಂಪ್ರೀತಿ, ಸಂ. (ನಾ) ಪ್ರೀತಿ, ಮೋಹ.

ಸಂಪುಲ್ಲ, ಸಂ. (ವಿ) ಅರಳಿದ.

ಸಂಬಂಧಿಸು, ಸಂ. (ಕ್ರಿ) ಕೂಡಿಸು.

ಸಂಬರ, ಸಂ. (ನಾ) ನೀರು. ೨ ಒಬ್ಬದೈತ್ಯ.

ಸಂಬರಾರಿ, ಸಂ. (ನಾ) ಕಾಮ.

ಸಂಬಲ, ಸಂ. (ನಾ) ಘರಾಳ.

ಸಂಬಾಕೃತ, ಸಂ. (ವಿ) ಎರಡು ಸಾರೆ ಹರಗಿದ್ದು.

ಸಂರಕ್ಷಣೆ, ಸಂ. (ನಾ) ಕಾಪಾಡುವಿಕೆ.

ಸಂರಕ್ಷಿಸು, ಸಂ. (ಕ್ರಿ) ಕಾಪಾಡು.

ಸಂರಾವ, ಸಂ. (ನಾ) ಧ್ವನಿ.

ಸಂರೋಧ, ಸಂ. (ನಾ) ವಿಘ್ನ, ಅಡ್ಡಿ.

ಸಂಲಾಪ, ತ. (ನಾ) ಸಲ್ಲಾಪ. ನೋ.

ಸಂವತ್ಸರ, ಸಂ. (ನಾ) ವರ್ಷ.

ಸಂವದನ, } ಸಂ. (ನಾ) ಮಣಿ
ಸಂವನನ, } ಮಂತ್ರ ಮುಂತಾದವುಗಳಿಂದ ಮೋಸಮಾಡೋಣ.

ಸಂವರಣೆ, ಹ. (ನಾ) ಸಿದ್ಧ. [illegible]

Haribhaktisaravu, Native poem on Vishnuism. Canarese.

ಶ್ರೀರಸ್ತು.

ಜಯಕೃಷ್ಣಭಗವನ್

ಶ್ರೀಮದ್ರಮಾರಮಣ ಚರಣ ಸ್ಮರಣ ಪ್ರವಣ ಪರಿ
ಪೂತಾಂತಃಕರಣರಾದ
ಕನಕದಾಸರೆಂಬ ಭಗವತರಿಂ
ವಿರಚಿತವಾಗಿರ್ಪ
ಹರಿಭಕ್ತಿಸಾರವು

ಎರಡನೆ ಛಾಪೆ, ಪ್ರತಿ, ೧೦೦೦

BANGALORE:

PRINTEDBY H. NARASIMMIAH, AT THE

VICHARA, DURPANA PRESS,

1869.

ಶ್ರೀ

(ಶ್ರೀ ಕೃಷ್ಣಾಯ)

ವಿಷ್ಣುಭಕ್ತಿಸಾರ.

(ಭಾಮಿನೀ ಷಟ್ಪದಿ)

ಶ್ರೀಯರಸಗಾಂಗೇಯನುತಕಾಂ | ತೇಯವಂದಿತಚರಣಕಮಲದ | ಛಾಯತಾಂಬಕರೂಪಶಿನಮ್ರಯದೇವಕೀತನಯ || ರಾಯರಘುಕುಲವರ್ಯಭೂಸುರ | ಪ್ರೇಯಸುರಪುರನಿಲಯಚೆನ್ನಿಗ | ರಾಯಚತುರೋಪಾಯರಕ್ಷಿಸುನಮ್ರನನವರತ ... ...||೧||

ದೇವದೇವಜಗದ್ಭರಿತವಸು | ದೇವಸುತಜಗದೇಕನಾಥರ | ಮಾವಿನೋದಿತಸಜ್ಜನಾನತನಿಖಿಲಗುಣಭರಿತ || ಭಾವಜಾರಿಪ್ರಿಯನಿರಾಮಯ | ರಾವಣಾಂತಕರಘುಕುಲಾನ್ವಯ | ದೇವಅಸುರವಿರೋಧಿರಕ್ಷಿಸುನಮ್ರನನವರತ ||೨||

ಅನುಪಮಿತಚಾರಿತ್ರಕರುಣಾ | ವನಧಿಭಕ್ತಕುಟುಂಬಿಯೋಗೀ | ಜನಹೃದಯಪರಿಪೂರ್ಣನಿತ್ಯಾನಂದನಿಗಮನುತ || ವನಜನಾಭಮುಕುಂದಮುರಮ | ರ್ದನಜನಾರ್ದನತ್ರೈಜಗತ್ಪಾ | ವನಸುರಾರ್ಚಿತದೇವರಕ್ಷಿಸುನಮ್ರನನವರತ ... ... ||೩||

ಕಮಲಸಂಭವವಿನುತವಾಸವ | ನಮಿತಮಂಗಳಚರಿತದುರಿತ | ಕ್ಷಮಿತರಾಘವವಿಶ್ವಪೂಜಿತವಿಶ್ವವಿಶ್ವಮಯ||

ಅಮಿತವಿಕ್ರಮಭೀಮಸೀತಾ । ರಮಣವಾಸುಕಿಶಯನಖಗ
ಪತಿ । ಗಮನಕಂಜಜನಯ್ಯರಕ್ಷಿಸುನಮ್ಮನನವರತ ॥೪॥

ಕ್ಷೀರವಾರಿಧಿಶಯನಶಾಂತಾ । ಕಾರವಿವಿಧವಿಚಾರಗೋ
ಪೀ । ಜಾರನವನೀತಚೋರಚಕ್ರಾಧಾರಭವದೂರ ॥ ಮಾ
ರಪಿತಗುಣಹಾರಸರಸಾ । ಕಾರರಿಪುಸಂಹಾರತುಂಬುರು ।
ನಾರದಪ್ರಿಯವರದರಕ್ಷಿಸುನಮ್ಮನನವರತ ... ॥೫॥

ತಾಮರಸದಳನಯನಭಾರ್ಗವ । ರಾಮಹಲಧರರಾಮ
ದಶರಥ । ರಾಮಮೇಘಶ್ಯಾಮಸದ್ಗುಣಧಾಮನಿಸ್ಸೀಮ ॥
ಸಾಮಗಾನಪ್ರೇಮಕಾಂಚನ । ದಾಮಧರಸುತ್ರಾಮವಿರ
ಚಿತ । ಕಾಮರವಿಕುಲಸೋಮರಕ್ಷಿಸುನಮ್ಮ ॥೬॥

ವೇದಗೋಚರವೇಣುನಾದವಿ । ನೋದಮಂದರಶೈಲ
ಧರಮಧು । ಸೂದನಾಚ್ಯುತಕಂಸದಾನವರಿಪುಮಹಾಮ
ಹಿಮಾ ॥ ಯಾದವೇಂದ್ರಯಶೋದೆನಂದನ । ನಾದಬಿಂದುಕ
ಳಾತಿಶಯಪ್ರ । ಹ್ಲಾದರಕ್ಷಕವರದರಕ್ಷಿಸುನಮ್ಮ ... ॥೭॥

ಅಕ್ಷಯಾಶ್ರಿತಸುಜನಜನಸಂ । ರಕ್ಷಣಶ್ರೀವತ್ಸಕಾಂ
ಸ್ತುಭ । ಮೋಕ್ಷದಾಯಕಕುಟಿಲದಾನವಶಿಕ್ಷಕಮುದಾ
ಕ್ಷ ॥ ಪಕ್ಷಿವಾಹನದೇವಸಂಕುಲ । ಪಕ್ಷಜಗದಧ್ಯಕ್ಷವರನಿಟ
ಲಾಕ್ಷಸಖಸರ್ವೇಶರಕ್ಷಿಸುನಮ್ಮನನವರತ ... ॥೮॥

ಚಿತ್ರಕೂಟನಿವಾಸವಿಶ್ವ । ಮಿತ್ರಕ್ರತುಸಂರಕ್ಷಶಶಿರವಿ
ನೇತ್ರಭವ್ಯಚರಿತ್ರಸದ್ಗುಣಗಾತ್ರಸತ್ಪಾತ್ರ ॥ ಧಾತ್ರಿಜಾಂತ
ಕಕಪಟನಾಟಕ । ಸೂತ್ರಪರಮಪವಿತ್ರಫಲ್ಗುಣ । ಮಿತ್ರ

ವಾಕ್ಯವಿಚಿತ್ರರಕ್ಷಿಸುನಮ್ಮನನವರತ॥ ... ... ॥೯॥
ಮಂಗಳಾತ್ಮಕದುರಿತತಿಮಿರಪ । ತಂಗಗರುಡತುರಂಗ
ರಿಪುಮದ । ಭಂಗಕೀರ್ತಿತರಂಗಪುರಹರಸಂಗನೀಲಾಂಗ॥
ಅಂಗದಪ್ರಿಯಸಾಂಗಪಿತಕಾ । ಳಿಂಗಮರ್ದನಅಮಿತಕರು
ಣಾ । ಪಾಂಗಶ್ರೀನರಸಿಂಗರಕ್ಷಿಸುನಮ್ಮನನವರತ ॥೧೦॥
ದಾಶರಥಿವೈಕುಂಠನಗರನಿ । ವೇಶತ್ರೈಜಗದೀಶ ಪಾಪ
ವಿ । ನಾಶಪರಮವಿಲಾಸಹರಿಸರ್ವೇಶದೇವೇಶ ॥ ವಾಸುದೇ
ವದಿನೇಶಶತಸಂ । ಕಾಶಯದುಕುಲವಂಶತಿಲಕಪ । ರಾಶ
ರಾನತದೇವರಕ್ಷಿಸುನಮ್ಮನನವರತ ... ... ॥೧೧॥
ಕುಂದಕುಟ್ಮಲರದನಪರಮಾ । ನಂದಹರಿಗೋವಿಂದ
ಸನಕಸ । ನಂದವಂದಿತಸಿಂಧುಬಂಧನಮಂದರಾದ್ರಿಧರ ॥ ಇಂ
ದಿರಾಪತಿವಿಜಯಸಖಅರ । ವಿಂದನಾಭಪುರಂದರಾರ್ಚಿತ।
ನಂದಕಂದಮುಕುಂದರಕ್ಷಿಸುನಮ್ಮನನವರತ ॥೧೨॥
ಬಾಣಬಾಹುಚ್ಛೇದರಾವಣ । ಪ್ರಾಣನಾಶನಪುಣ್ಯನಾ
ಮಪ । ರಾಣಪುರುಷೋತ್ತಮನಿಪುಣಅಣುರೇಣುಪರಿಪೂ
ರ್ಣ॥ಕ್ಷೋಣಿಪತಿಸಲಲಿತಸುದರ್ಶನ । ಪಾಣಿಪಾಂಡವರಾ
ಜಕಾರ್ಯಧು । ರೀಣಜಗನಿರ್ಮಾಣರಕ್ಷಿಸುನಮ್ಮ॥೧೩॥
ನೀಲವರ್ಣವಿಶಾಲಶುಭಗುಣ । ಶೀಲಮುನಿಕುಲಪಾಲ
ಲಕ್ಷ್ಮೀ। ಲೋಲರಿಪುಶಿಶುಪಾಲಮಸ್ತಕಶೂಲವನಮಾಲ॥
ಮೂಲಕಾರಣವಿಮಲಯಾದವ । ಜಾಲಹಿತಗೋಪಾಲ
ಅಗಣಿತ । ಲೀಲಕೋಮಲಕಾಯರಕ್ಷಿಸುನಮ್ಮ ॥೧೪॥

ನಾಗನಗರಿಧರಿತ್ರಿಕೋಶವಿ। ಭಾಗತಂತ್ರನಿಯೋಗಗವೆ
ನಸ। ರಾಗ ಪಾಂಡವರಾಜಜಿತಸಂಗ್ರಾಮನಿಸ್ಸೀಮಾ॥
ಯೋಗಗಮ್ಯಭವಾಬ್ಧಿವಿಷಧರ। ನಾಗ ಗಾರುಡ ಮಂತ್ರವಿ
ದಭವ। ರೋಗವೈದ್ಯವಿಚಿತ್ರರಕ್ಷಿಸುನಮ್ಮ ॥೧೫॥

ಶ್ರೀಮದುತ್ಸಹದೇವನುತಶ್ರೀ। ರಾಮನಿನ್ನಯಚರ
ಣಸೇವಕ। ಪ್ರೇಮದಿಂಸಾಷ್ಟಾಂಗವೆರಗಿಯೆಮಾಳ್ಪಬಿನ್ನ
ಹವ॥ ಈಮಹಿಯೊಳೀವರಿಗೆನಾವ್ವ। ಕ್ಷೇಮಿಗಳುನಿನ್ನ
ಯಪದಾಬ್ಜ। ಕ್ಷೇಮವಾರ್ತೆಯನರುಹಿರಕ್ಷಿಸು ॥೧೬॥

ಈಗಲೀಮರ್ಯಾದೆಯಲಿಶರ। ಣಾಗತರಸೇವೆಯೊಳು
ಹೊಂಪುಳಿ। ಯಾಗಿಬಾಳುವರೇನುಧನ್ಯರೊಹರಮಹಾ
ದೇವ॥ ಭೋಗಭಾಗ್ಯವಬಯಸಿಮುಕ್ತಿಯ। ನೀಗಿನಿಮ್ಮ
ನುಭಜಿಸಲರಿಯದ। ಯೋಗಿಗಳಮಾತೇನುರಕ್ಷಿಸು॥೧೭॥

ಭಕ್ತಿಸಾರದಚರಿತೆಯನುಹರಿ। ಭಕ್ತರಾಲಿಸುವಂತೆರಚಿ
ಸುವೆ। ಯುಕ್ತಿಯಲಿಬರೆದೋದಿದವರಿಷ್ಟಾರ್ಥಸಿದ್ಧಿಪುದು॥
ಮುಕ್ತಿಗಿದುನೆಲೆದೋರುವದುಹರಿ। ಭಕ್ತರನುಲಾಲಿಪುದು
ನಿಜಮತಿ। ಭಕ್ತಗೊಲಿವಂದದಲಿರಕ್ಷಿಸುನಮ್ಮ ॥೧೮॥

ನಳಿನಲೋಚನನಿನ್ನಮೂರ್ತಿಯ। ಕಳೆಬೆಳಗುತಿದೆ
ಲಕರಿಯಳಿಭೂ। ತಳದೊಳಚ್ಚರಿಯಾದನಾಮಾಮೃತಸ
ಮುದ್ರದಲಿ॥ ಬಳಸುವರುಸತ್ಕವಿಗಳವರ। ಗ್ಗಳಿಕೆಯನುನಗಿನಿ
ತಿಲ್ಲಸನ್ಮತಿ। ಗಳಿಗೆಮಂಗಳವಿತ್ತುರಕ್ಷಿಸುನಮ್ಮ ॥೧೯॥

ಗಿಳಿಯಮರಿಯನುತಂದುಪಂಜರ। ದೊಳಗೆಪೋಷಿಸಿಕ

ಲಿಸಿಮೃದುನುಡಿ | ಗಳನುಲಾಲಿಸಿಕೇಳ್ವಪರಿಣತರಂತೆನೀ
ಯೆನ್ನ || ತಿಳುಹುಮತಿಯನುಯನ್ನ ಜಿಹ್ವೆಗೆ | ಮೊಳೆ
ಗುವಂದದಿನಿನ್ನನಾಮಾ | ವಳಿಯಪೊಗಳಿಕೆಯಿತ್ತುರಕ್ಷಿಸು
ನಮ್ಮನನವರತ … … … … … ||೨೦||

ಪೊಗಳಲಳವೇನಿನ್ನನಾಮವ | ಸುಗುಣಸಚ್ಚಾರಿತ್ರಕ
ಥನವ | ನಗಣಿತೋಪಮ ಅಮಿತವಿಕ್ರಮ ಗಮ್ಯನೀನೆಂ
ದು || ನಿಗಮತತಿಕೈವಾರಿಸುತಪದ | ಯುಗವಕಾಣದೆಬಳ
ಲುತಿದೆವಾ | ಸುಕೀಶಯನಸರ್ವೇಶರಕ್ಷಿಸುನಮ್ಮ ||೨೧||

ವೇದಶಾಸ್ತ್ರಪುರಾಣಪುಣ್ಯದ | ಹಾದಿಯನುನಾನರಿಯೆ
ತರ್ಕದ | ವಾದದಲಿಗುರುಹಿರಿಯರರಿಯದ ಮೂಢಮತಿ
ಯನಗೆ || ಆದಿಮೂರುತಿನೀನುನೆರೆಕರು | ಣೋದಯನು
ಹೃದಯಾಂಗಣದಿಜ್ಞಾ | ನೋದಯವನೆನಗಿತ್ತುರಕ್ಷಿಸುನ
ಮ್ಮನನವರತ … … … … … ||೨೨||

ಹಸಿವರಿತುತಾಯ್ತನ್ನಶಿಶುವಿಗೆ | ಒಸದುಮೊಲೆಕೊಡು
ವಂತೆನೀಪೋ | ಷಿಸದೆಬೇರಿನ್ನಾರುಪೋಷಕರಾಗಿಸಲಹು
ವರು || ಬಸುರೊಳಗೆಬ್ರಹ್ಮಾಂಡಕೋಟಿಯ | ಪಸರಿಸಿದ
ಪರಮಾತ್ಮನೀನೆಂ | ದುಸುರುತಿವೆ ವೇದಗಳುರಕ್ಷಿಸುನ
ಮ್ಮನನವರತ … … … … … ||೨೩

ಇಬ್ಬರಣುಗರುನಿನಗೆಅವರೊಳ | ಗೊಬ್ಬಮಗನೀರೇ
ಳುಲೋಕದ | ಹೆಬ್ಬಿಳಸುಬೆಳವಂತೆಕಾರಣಕರ್ತನಾದ
ವನು || ಒಬ್ಬಮಗನದಬರೆವಕರಣಿಕ | ರಿಬ್ಬರೀಲೋಕಪ್ರ

ಸಿದ್ಧರು । ಹಬ್ಬಿಸಿದೆಪ್ರಾಣಿಗಳರಕ್ಷಿಸುನಮ್ರ ॥೨೪॥

ಸಿರಿಯೆಕುಲಸತಿಸುತನುಕಮಲಜ। ಹಿರಿಯಸೊಸೆಶಾ
ರದೆಸಹೋದರಿ। ಗಿರಿಜೆಮೈದನುಶಂಕರನುಸುರರೆಲ್ಲಕಿಂಕ
ರರು ॥ ನಿರತಮಾಯೆಯುದಾಸಿನಿಜವುಂ। ದಿರವುಜಾಂಡ
ವುಜಂಗಮಸ್ಥ। ವರಕುಟುಂಬಿಗನೀನುರಕ್ಷಿಸು ॥೨೫॥

ಸಾಗರನಮಗಳರಿಯದಂತೆಸ। ರಾಗದಲಿಸಂಚರಿಸುತಿಹೆ
ಉ।ದ್ಯೋಗವೇನುನಿಮಿತ್ತಕಾರಣವಿಲ್ಲಲೋಕದಲಿ॥ಭಾ
ಗವತರಾದವರಸಲಹುವ। ನಾಗಿಸಂಚರಿಸುವದುಈಭವ।
ಸಾಗರದಿಮುಳುಗಿಸದೆರಕ್ಷಿಸುನಮ್ರನನವರತ ॥೨೬॥

ಹಸ್ತಿವಾಹನನಾದಿಯಾದಸ। ಮಸ್ತದೇವನಿಕಾಯದೊ
ಳಗೆಸ। ದಸ್ಥನಾವನುನಿನ್ನವೋಲ್ ಶರಣಾಗತರಪೊರೆವ॥ಹ
ಸ್ತಕಲಿತಸುದರ್ಶನದೊಳರಿ। ಮಸ್ತಕವನಿಳುಹುವಪರಾಪ
ರ। ವಸ್ತುವಲ್ಲವೆನೀನುರಕ್ಷಿಸುನಮ್ರನನವರತ ॥೨೭॥

ಹಗೆಯುರಿಗೆವರವೀವರಿಬ್ಬರು। ತೆಗೆಯಲರಿಯರುಕೊ
ಟ್ಟವರಗಳ। ತೆಗದುಕೊಡುವಸಮರ್ಥರಾರೀಜಗಕೆನಿನ್ನಂ
ತೆ॥ ಸುಗುಣರಿನ್ನಾರುಂಟುಕದನವ। ಬಗೆದುನಿನ್ನೊಳು
ಜೈಸುವವರೀ। ಜಗದೊಳುಂಟೇದೇವರಕ್ಷಿಸು ॥೨೮॥

ಸುಮನಸರವೈರದಲಿಕೆಲಬರು। ಕುಮತಿಗಳುತಪದಿಂದ
ಭರ್ಗನ। ಕಮಲಜನಪದಯುಗವಮೆಚ್ಚಿಸಿವರವಪಡದಿಹ
ರು॥ ಸಮರಮುಖದೊಳಗುಪಮೆಯಲಿವಿ। ಕ್ರಮದಿವೈರ
ರವಮಾಡಿದವರಿಗೆ। ಅಮರಪದವಿಯನಿತ್ತೆರಕ್ಷಿಸು ॥೨೯॥

ಬಲಿಯಬಂಧಿಸಿಮೊರೆಯಿಡುವಸತಿ | ಗೊಲಿದುಅಕ್ಷಯ
ವಿತ್ತುಕರುಣದಿ | ಮೊಲೆಯನುಣಿಸಿದಬಾಲಕಿಯಪಿಡಿದ
ಸುವನಪಹರಿಸಿ || ಶಿಲೆಯಸತಿಯಳಮಾಡಿತ್ರಿಪುರದ | ಲಲ
ನೆಯರವ್ರತಗೆಡಿಸಿಕೊಡಿದ | ಕೆಲಸವೃತ್ತಮಮಾಯ್ತುರಕ್ಷಿ
ಸು ನಮ್ಮನನವರತ ... ... ||೩೦||
ಕರಿಯಕಾಯ್ದ್ದಜಲಧಿಮಕರಿಯ | ತರಿದುಹಿರಣ್ಯಾ
ಕ್ಷಕನಸೀಳ್ದ | ತರಳನನುತಲೆಗಾಯ್ದಶಕಟಾಸುರನಹತ
ಮಾಡಿ || ದುರುಳಕಂಸನಕೊಂದುಮಗಧನ | ಮುರಿದುಮ
ತ್ಸನಹಂಪಳಿಶಿಖರ | ಹರಣವನುಹಿಂಗಿಸಿದೆರಕ್ಷಿಸು ||೩೧||
ಶಿಶುತನದಸಾಮರ್ಥ್ಯದಲಿಕೆಲ | ರಸುರರನುಸಂಹರಿಸಿ
ಚಕ್ರವ | ಬಿಸುಟುಯೌವನಕಾಲದಲಿಯಾಪಾಂಡುಸುತ
ರಿಂದ || ವಸುಮತಿಯಭಾರವನಿಳುಹಿಸಾ | ಹಸದಿಮೆರೆದ
ವನಾಗಿನೀಮೆ | ಚ್ಚಿಸಿದೆತ್ರಿಜಗವನೆಲ್ಲರಕ್ಷಿಸುನಮ್ಮ ||೩೨||
ಎಲ್ಲರಲಿನೀನಾಗಿಸುಮನಸ | ರಲ್ಲಿಅತಿಹಿತನಾಗಿಯಾ
ದವ | ರಲ್ಲಿಬಾಂಧವನಾಗಿದಾನವರಲ್ಲಿಹಗೆಯಾಗಿ || ಕೊಲ್ಲಿ
ಸಿದೆಭೀಮಾರ್ಜುನರಕೈ | ಯಲ್ಲಿಕೌರವಕುಲವನೆಲ್ಲವ |
ಬಲ್ಲಿದನುನೀನಹುದುರಕ್ಷಿಸುನಮ್ಮನನವರತ ||೩೩||
ನರಗೆಸಾರಥಿಯಾಗಿರಣದೊಳು | ತುರಗನೀರಡಿಸಿದರೆ
ವಾರಿಯ | ಸರಸಿಯನುನಿರ್ಮಿಸಿಕಿರೀಟಿಯಕೈಯಸ್ಯಂ
ಧವನ || ಶಿರವಕೆಡಹಿಸಿಅವನತಂದೆಯ | ಕರತಳಕೆನೀಡಿಸಿದೆಹ
ರಹರ | ಪರಮಸಾಹಸಿನೀಸುರಕ್ಷಿಸುನಂಮನನವರತ ||೩೪||

ಬವರದಲಿಖತ್ತಿಗೊಂಡುಗದೆಯೊಳು । ಕವಿದುನಿನ್ನ ಶಸ್ತ್ರ
ತಾಯುಧನುಹೊ । ಕ್ಕವಘಳಿಸಿಹೊಯ್ದಾಡಿತನ್ನಾಯು
ಧದಿತಾವುಡಿದಾ ॥ ವಿವರವೇನೂತ್ತಿಳಿಯೆನೀವೂ । ಯವ
ನುನೀನೇಬಲ್ಲೆನಿನ್ನಾ । ಯುವನುಬಲ್ಲವರುಂಟೆ ರಕ್ಷಿಸುನ
ಮ್ಮನನವರತ ... ... ॥೩೫॥

ಇಳೆಗೆಪತಿಯಾದವನುಯಾದವ । ರೊಳಗೆಬಾಂಧವನಿ
ನಗೆಸೋದರ । ದಳಿಯನಾದಭಿಮನ್ಯುವನುಕೊಲ್ಲಿಸಿದೆ
ಕೊಳುಗುಳದಿ ॥ ಅಳಲಿನಬುಧಿಯೊಳದ್ದಿತಂಗಿಯ । ಬಳ
ಲಿಸಿದೆಕುಲಗೋತ್ರಬಾಂಧವ । ರೊಳಗೆಕೀರ್ತಿಯಪಡದೆರ
ಕ್ಷಿಸುನಮ್ಮನನವರತ ... ... ॥೩೬॥

ತಾಯನಗಲಿದತನಯನೀರಾ।ಧೇಯನೊಳಗೆರಹಸ್ಯದ
ಲಿಕುಲ।ದಾಯವನುನೆರೆತಿಳುಹಿಅರ್ಜುನನಿಂದಕೊಲ್ಲಿಸಿದೆ॥
ಮಾಯಮಂತ್ರದಕುಟಿಲಗುಣವ । ನ್ಯಾಯವ್ವೇಸುನ್ಯಾ
ಯವ್ವೇನಿಂ। ನಾಯವನುನೀಬಲ್ಲೆರಕ್ಷಿಸುನಮ್ಮ॥೩೭॥

ಕೊಲ್ಲಬಗೆದವನಾಗಿನೀಹಗೆ। ಯಲ್ಲಿಸಖ್ಯವಬೆಳಸಲದು
ಹಿತ। ವಲ್ಲನಿನ್ನಯಗುಣವಬಲ್ಲವರಿಲ್ಲಯದುಕುಲದಿ॥ಗೊ
ಲ್ಲನಾರಿಯರೊಳುಪ್ರವರ್ತಕ ನಲ್ಲವೇಭಾವಿಸಲುಲೋಕ
ದೊ। ಳೆಲ್ಲರೂಸರಿನಿನಗೆರಕ್ಷಿಸುನಮ್ಮನನವರತ ॥೩೮॥

ಮಗನಕೊಂದವನಾಳುವಂತಾ। ಸುಗುಣೆಯರುಹದಿನಾ
ರುಸಾವಿರ। ಸೊಗಸುಗಾತಿಯರವರಮೋಹದಬಲೆಗೆವಿಟ
ನಾಗಿ॥ ಬಗೆಬಗೆಯರತಿಕಲೆಗಳಲಿಕೊ । ರುಗುರನಾಟಿಸಿಮ

ರದುನೀನೀ | ಜಗಕೆಪಾವನನಾದೆರಕ್ಷಿಸುನಮ್ಮನನ ||೩೯||

ಏನುಮಾಡಿದಡೇನುಕರ್ಮವ | ನೀನೊಲಿಯದಿನ್ನಿಲ್ಲ
ವಿದಕನು | ಮಾನವುಂಟೇಭ್ರಮರಕೀಟನ್ಯಾಯದಂದದ
ಲಿ || ನೀನೊಲಿಯೆತೃಣಪರ್ವತವುಪುಸಿ | ಯೇನುನೀಪತಿ
ಕರಿಸೆಬಳಿಕೆ | ನ್ನೇನುಚಿಂತಿಸಲೇಕೆರಕ್ಷಿಸುನಮ್ಮನನವ
ರತ ... ... ||೪೦||

ಎಷ್ಟುಮಾಡಲುಮನುಷ್ಯತಾಪಡ | ದಷ್ಟುಯೆಂಬುದ
ಲೋಕದೊಳುಮತ್ತಿ | ಗೆಟ್ಟಮಾನವರಾಡುತಿಹರಾಮಾ
ತದಂತಿರಲಿ || ಪಟ್ಟವಾರಿಂದಾಯ್ತುಧ್ರುವನಿಗೆ | ಕೊಟ್ಟವರ
ತಪ್ಪಿತೆಕುಚೇಲಗೆ | ಇಷ್ಟಬಾಂಧವನೀನುರಕ್ಷಿಸುನಮ್ಮ
ನನವರತ ... ... ||೪೧||

ತನ್ನದೇಹಾತುರದಲಡವಿಯೊ | ಳನ್ಯರನುಸಂಹರಿಸು
ತಿರುತಿರೆ | ನಿನ್ನನಾಮದೊಳಧಿಕವೆರಡಕ್ಷರವಬಣ್ಣಿಸುತ ||
ಧನ್ಯನಾದನುಮುನಿಕುಲದಿಸಂ | ಪನ್ನನಾದನುನೀನೊಲಿ
ದಬಳಿ | ಕಿನ್ನುಪಾತಕವುಂಟೆರಕ್ಷಿಸುನಮ್ಮನನವ ||೪೨||

ನಿನ್ನಸತಿಗಳುಪಿದದುರಾತ್ಮನ | ಚೆನ್ನನಲಿಬಂದವನ
ಕರುಣದಿ | ಮನ್ನಿಸಿದಕಾರಣದಯಾಪರಮೂರ್ತಿಯೆಂ
ದೆನುತ || ನಿನ್ನಭಜಿಸಿದಸಾರ್ವಭೌಮರಿ | ಗಿನ್ನುಇ
ಹಪರವುಂಟುಸದ್ಗುಣ | ರನ್ನಸಿರಿಸಂಪನ್ನರಕ್ಷಿಸುನಮ್ಮನ
ನವರತ ... ... ||೪೩||

ವೀರರಾವಣನೊಡನೆಹೋರಿದ | ವೀರರಗ್ಗದಕಪಿಗಳ

ವರೊಳು । ಮಾರುತನಮಗನೇನುಧನ್ಯನೊಬ್ರಹ್ಮಪ
ಟ್ಟದಲಿ ॥ ಸೇರಿಸಿದೆನಿನ್ನಂತೆಕೊಡುವಲು । ದಾರಿಯಾವ
ನು ತ್ರಿಜಗದೊಳಗಾ । ಕಾರಣದಿನಂಬಿದೆನುರಕ್ಷಿಸು ನಮ್ಮ
ನನವರತ ... ... ॥೪೪॥

ಶಿವಶಿವಾನೀಮಾಡಿದುಪಕಾ । ರವನುಮರದವರುಂಟೆ
ಪಾಪದಿ । ನವೆದಜಾಮಿಳಗೊಲಿದುಪ್ರಾಣ ವಿಯೋಗಕಾ
ಲದಲಿ ॥ ಜವನವರಕೈಗೊಪ್ಪಿಸದೆಕಾ । ಯ್ದವನುನೀ
ಮಾಧವನುಮಿಕ್ಕಾ।ದವರಿಗುಂಟೇಕರುಣರಕ್ಷಿಸು ನಂಮ
ನನವರತ ... ... ॥೪೫॥

ಹೆತ್ತಮಗಳನುಮದುವೆಯಾದವ । ನುತ್ತಮನು ಗುರುಪ
ತ್ನಿಗಳುಪಿದ । ಚಿತ್ತಜನಮಾವನುಕೃತಘ್ನನುನಿನಗೆಮೈ
ದನನೂ ॥ ಹೊತ್ತತಪ್ಪಿಸಿಕಾಮದಲಿಮುನಿ । ಪೋತ್ರಮ
ನಮಡದಿಯನುನೆರದವ । ಗಿತ್ತೆಕೈವಲ್ಯವನುರಕ್ಷಿಸು ನಂ
ಮನನವರತ ... ... ॥೪೬॥

ಇಲ್ಲಿಹನುಅಲ್ಲಿಲ್ಲವೆಂಬೀ । ಸೊಲ್ಲುಸಲ್ಲದುಹೊರಗೊ
ಳಗೆನೀ । ನಲ್ಲದಿಲ್ಲನ್ಯತ್ರ ವೆಂಬುದನೆಲ್ಲಕೆಲಕೆಲರು ॥ ಬ
ಲ್ಲರಿಳೆಯೊಳುಭಾಗವತರಾ । ದೆಲ್ಲರಿಗೆವಂದಿಸದಕುಜನರಿ।
ಗಿಲ್ಲಸದ್ಗತಿನೋಡಿರಕ್ಷಿಸು ನಂಮನನವರತ ... ॥೪೭॥

ಸಿರಿಯಸಂಪತ್ತಿನಲಿನೀಮೈ। ಮರದುಮದಗರ್ವದಲಿ
ದೀನರ। ಕರುಣದಿಂದೀಕ್ಷಿಸದೆಕಡೆಗಣ್ಣಿಂದನೋಡುವರೆ॥ಹ
ರಿಹರಾನಾಥರನುಪಾಲಿಸಿ । ವರವಕೊಡುವಲು ದಾರಿಯೆಂ

ಬೀ । ಬಿರುದಬಿಡುವರೆತೆಂದೆರಕ್ಷಿಸುನಂಮನನವರತ॥೪೮॥

ದೀನನಾನುಸಮಸ್ತಲೋಕಕೆ । ದಾನಿನೀನುವಿಚಾರಿಸಲುಮತ್ತಿ । ಹೀನನಾನು ಮಹಾಮಹಿಮಕೈವಲ್ಯ ಪತಿ ನೀನು ॥ ಏನಬಲ್ಲೆನುನಾನುನೆರೆಸು । ಜ್ಞಾನಮೂರುತಿ ನೀನುನಿನ್ನ ಸ|ಮಾನರುಂಟೇದೇವರಕ್ಷಿಸುನಂಮ್ಮ॥೪೯॥

ತರಳತನದಲಿಕೆಲವುದಿನದುರು । ಭರದಗರ್ವದಿಕೆಲವುದಿನಮ್ಮೈ । ಮರದುನಿಮ್ಮಡಿಗೆರಗದಾದೆನುವಿಷಯಕೇಳಿಯಲಿ ॥ ನರಕಭಾಜನನಾಗಿಕಾಮಾ । ತುರದಿಪರಧನಪರಸತಿಗೆಮನ । ಹರಿದಪಾಪವಕಳೆದುರಕ್ಷಿಸುನಮ್ಮನನವರತ ॥೫೦॥

ಮರದೆನಭ್ಯುದಯದಲಿನಿಮ್ಮನು । ಮರೆಯೆನಾಪತ್ತಿನಲಿಹರಿಯೆಂ । ದೊರಲುವೆನುಮನವೇಕಭಾವದೊಳಿಲ್ಲನಿಮ್ಮಡಿಯ ॥ ಮರದುಬಾಹಿರನಾದವನನೀ । ಮರವರೇಹಸುತನ್ನಕಂದನ । ಮರವುದೇಮಮತೆಯಲಿರಕ್ಷಿಸುನಂಮನನವರತ ... ... ॥೫೧॥

ಧಾರುಣಿಗೆವರಚಕ್ರವರ್ತಿಗ । ಳಾರುಮಂದಿನೃಪಾಲಕರುಹದಿ । ನಾರುಮಂದಿಯುಧರಣಿಯನುಮುನ್ನಾಳ್ದನೃಪರೆನಿತೋ ॥ ವೀರರನುಮೆಚ್ಚಿದಳೆಧರಣೀ । ನಾರಿಬಹುಮೋಹದೊಳುನಿನ್ನನು । ಸೇರಿಪ್ರೋಲೈಸುವಳುರಕ್ಷಿಸುನಮ್ಮನನವರತ ... ... ॥೫೨॥

ಭಾರಕರ್ತನುನೀನುಬಹುಸಂ । ಸಾರಿಯೆಂಬುದನಿಗಮತತಿಕೈ । ವಾರಿಸುತ್ತಿದೆದಿವಿಜಮನುಜಭುಜಂಗರೊಳಗಿ

ನ್ನು ॥ ಆರಿಗುಂಟುಸ್ವತಂತ್ರನಿನ್ನಂ । ತಾರುಮುಕ್ತಿಯ
ನೀವಸದ್ಗುರು । ವಾರುಜಗದಧ್ಯಕ್ಷರಕ್ಷಿಸುನಮ್ಮ ॥೫೩॥

ಗತಿವಿಹೀನರಿಗಾರುನೀನೇ । ಗತಿಕಣಾಪತಿಕರಿಸಿಕೊ
ಡುಸ । ದ್ಗತಿಯನೀನೇದೇವನಿನಗಪರಾಧಿನಾನಲ್ಲ ॥ ಶ್ರುತಿ
ವಚನವಾಡುವದುಶರಣಾ । ಗತರಸೇವಕನೆಂದುನಿನ್ನನು ।
ಮತವಿಡಿದುನಂಬಿದೆನುರಕ್ಷಿಸುನಮ್ಮನನವರತ ॥೫೪॥

ಈಗಲೋಈದೇಹವಿನಾಶ । ವಾಗಲೋನಿಜವಿಲ್ಲವೆಂ
ಬುದ । ನೀಗತಿಳಿಯದೆಮಡದಿಮನೆಮನೆವಾರ್ತೆಯೆಂದೆನು
ತ ॥ ರಾಗಲೋಭದಿಮುಳುಗಿಮುಂದಣ । ತಾಗುಬಾಗುಗ
ಳರಿಯೆನಿನ್ನನು । ಮಾರ್ಗವನುಬಯಸುವೆನುರಕ್ಷಿಸುನಮ್ಮ
ನನವರತ ... ... ॥೫೫॥

ಮಾಂಸರಕ್ತದಮಡುವಿನಲಿನವ । ಮಾಸಜನನಿಯಜಠ
ರದೊಳಗಿರು । ವಾಸಮಯದಲಿವೃತ್ತಿಯನುಕಲ್ಪಿಸಿದಪ್ರ
ಭುವಾರು ॥ ನೀಸಲಹಿದವನಲ್ಲಲೇಕರು । ಣಾಸಮುದ್ರನು
ನೀನಿರಲುಕಮ । ಲಾಸನನಹಂಗೇಕೆರಕ್ಷಿಸುನಮ್ಮ ॥೫೬॥

ಬಲುಮೃಗವುಮರಪಕ್ಷಿಕೀಟಕ । ಜಲಚರಾಘದಿಜನಿಸಿ
ದೆನುಕೋ । ಟಲೆಗೊಳಿಸಬೇಡಕಟಮಾನವನಾದಬಳಿಕಿ
ನ್ನು ॥ ಕೊಲಿಸದಿರುಯಮನಿಂದಮುರಹರ । ಒಲಿದುನಿನ್ನ
ನುಭಜಿಸುವವರಿಗೆ । ಕೊಲೆಗೆಕಾರಣವೇನುರಕ್ಷಿಸುನಮ್ಮ
ನನವರತ ... ... ॥೫೭॥

ಪಂಚಭೂತದಕಾಯದೊಳುನೀ । ವಂಚಿಸದೆಯಿರುತಿ

ರಲುಪೂರ್ವದ। ಸಂಚಿತದಫಲವೆನ್ನಲೇಕಿದು ಮರುಳುತ
ನದಿಂದ ॥ ಮಿಂಚಿದವರಿನ್ನುಂಟೆತಿಳಿಯೆಪ್ಪ। ಪಂಚವೆಲ್ಲಕೆ
ತಪ್ಪದವನೀ।ಕೊಂಚಗಾರನೆಕೃಷ್ಣರಕ್ಷಿಸುನಮ್ಮ॥೫೮॥

ಹಲವುಕರ್ಮಗಳಿಂದಮೂತ್ರದ। ಬಿಲಗಳಲಿಸಂಚರಿಸಿ
ಪದವಿಯ। ಫಲವಕಾಣದೆಹೊಲಬುತಪ್ಪಿದೆನೆನ್ನ ದೇಹ
ದಲಿ ॥ ಒಲಿದುನೀನಿರೆನಿನ್ನ ಸಲುಗೆಯ। ಬಲುಮೆಯಲಿಬ
ರಸೆಳವೆಮುಕುತಿಯ। ಲಲನೆಯನು ತಳುವಿಲ್ಲ ರಕ್ಷಿಸುನ
ಮ್ಮನನವರತ ... ... ॥೫೯॥

ಎತ್ತಿದೆನುನಾನಾಶರೀರವ। ಹೊತ್ತುಹೊತ್ತಲಸಿದೆನುಸ
ಲೆಬೇ। ಸತ್ತುನಿನ್ನ ಯಪದವಕಾಣದೆ ತೊಳಲಿಬಳಲಿದೆ
ನು ॥ ಸತ್ತುಹುಟ್ಟುವಹುಟ್ಟಿಹಿಂಗುವ। ಸುತ್ತತೊಡಕನು
ಮೋಸೆಲೆಪ್ಪರು। ಷೋತ್ರಮನೆಮನವ್ರೊಲಿದುರಕ್ಷಿಸುನಂ
ಮನನವರತ ... ... ॥೬೦॥

ಇಂದುಈಜನ್ಮದಲಿನೀನೇ। ಬಂಧುಹಿಂದಣ ಜನ್ಮ
ದಲಿಬಳಿ। ಸಂದುಮುಂದಣಜನ್ಮಕಧಿಪತಿಯಾಗಿ ಯಿರು
ತಿರುಲು ॥ ಎಂದಿಗೂತನಿಗಿಲ್ಲತನುಸಂ।ಬಂಧನಿನ್ನದುಯು
ನಗೆನೀಗತ್ರಿ।ಯೆಂದುಬಿನ್ನೈಸಿದೆನುರಕ್ಷಿಸುನಮ್ಮ॥೬೧॥

ಗಣನೆಯಿಲ್ಲದೆಜನನಿಯುರುವೊಲೆ। ಯುಣಿಸಲಾಪಯ
ಬಿಂದುಗಳನದ। ನೆಣಿಸಲಳವೇಸಪ್ತಸಾಗರಕಧಿಕವೆನಿಸುವ
ದು ॥ ಬಣಗುಕಮಲಜನದಕೆತಾನೇ। ಮಣೆಯಗಾರನು
ಈತಮಾಡಿದ। ಕುಣಿಕೆಗಳನೀಬಿಡಿಸಿರಕ್ಷಿಸು ॥೬೨॥

ಲೇಸಕಾಣೆನುಜನನಮರಣದಿ | ಗಾಸಿಯಾದೆನುನೊಂ
ದೆನಕಟಾ| ಲೇಸೆನಿಸಿನೋಡಲುಪರಾಪರವಸ್ತುನೀನಾಗಿ||
ನೀಸಲಹದವೆನಲ್ಲಲೇಕರು | ಣಾಸಮುದ್ರನುನೀನಿರಲುಕ
ಮ | ಲಾಸನನಸಹೇಂಗೇನುರಕ್ಷಿಸು ನಂಮನನವರತ ||೬೩||

ಕಾಪುರುಷರೈದಾರುವಂದಿಸ | ಮಾಪದಳಿಕಾಡುವರು
ಯನ್ನನು | ನೀಪರಾಮರಿಸದೆಪರಾಕಾಗಿಹುದುಲೇಸಲ್ಲ||
ಶ್ರೀಪದಾಬ್ಜದಸೇವೆಯಲಿನೆರೆ | ಪಾಪವನುಪರಿಹರಿಸಿನೀನಿ
ಜರೂಪಿನಲಿಬಂದೊಲಿದುರಕ್ಷಿಸುನಮ್ಮನನವರತ||೬೪||

ಐದುತತ್ವಗಳಾದವೊಂದ | ಕ್ಕೈದುಕಡೆಯಲಿತತ್ವವಿ
ಪ್ಪ| ತ್ತೈದುಕೂಡಿದತನುವಿನಲಿ ವಂಚಿಸದೆನೀನಿರಲು|| ಭೇ
ದಿಸದೆಜೀವಾತ್ಮತಾಸಂ | ಪಾದಿಸಿದಸಂಚಿತಸುಕರ್ಮವ|
ನಾದರಿಸಿಕೈಗೊಂಡುರಕ್ಷಿಸು ನಮ್ಮನನವರತ ||೬೫||

ಎಂಟುಗೇಣನದೇಹರೋಮಗ | ಳೆಂಟುಕೋಟಿಯು
ಕೀಲ್ಗಳಿರವ| ತ್ತೆಂಟುಮಾಂಸಗಳಿಂದಮಾಡಿದಮನೆಯವು
ನವೊಲಿದು || ನೆಂಟನೀನಿರ್ದಗಲಿದಡೆಪ್ರಾಣ | ಹೆಂಟೆಯಲಿ
ಮುಚ್ಚಿ ವರುದೇಹದ | ಲುಂಟೆಫಲಪುರುಷಾರ್ಥರಕ್ಷಿಸು ನ
ಮ್ಮನನವರತ ... ... ||೬೬||

ಸ್ನಾನಸಂಧ್ಯಾಧ್ಯಾನಜಪತಪ| ದಾನಧರ್ಮಪರೋ
ಪಕಾರವಿ | ಹೀನಜನ್ಮವನುಳಿವನಲ್ಲದೆಬೇರೆಗತಿಯುಂ
ಟೆ || ಏನುಮಾಡಿದಡೇನುಮುಕ್ತಿ | ಜ್ಞಾನವಿಲ್ಲದಡಿಲ್ಲಭಕ್ತಿ
ಗೆ | ನೀನೆಕಾರಣನಾಗಿರಕ್ಷಿಸುನಮ್ಮನನವರತ ||೬೭||

ಕೋಪವೆಂಬುದು ತನುವಿನಲಿನೆರೆ । ಪಾಪಪಾತಕದಿಂ
ದನರಕದ । ಕೂಪದಲಿ ಮುಳುಗುವದು ತಪ್ಪದು ಶಾಸ್ತ್ರಸಿದ್ಧ
ವಲೇ ॥ ರಾಪುಮಾಡದೆ ಬಿಡನು ಯಮನು । ರಾಪರಾಧಿ
ಯನೋಡಿ ಕೀರ್ತಿಕ । ಲಾಪವನು ನೀ ಕಾಯ್ದು ರಕ್ಷಿಸು
ನಮ್ಮನನವರತ ... ... ॥೬೮॥

ನಿನ್ನ ಸೂತ್ರದೊಳಾಡುವವು ಚೈ । ತನ್ಯ ಸಚರಾಚ
ರಗಳೆಲ್ಲವು । ನಿನ್ನ ಸೂತ್ರವು ತಪ್ಪಿದರೆ ಮೊಗ್ಗುವವು ಊ
ಹೆಗಳು ॥ ಇನ್ನು ನಮಗೆ ಸ್ವತಂತ್ರವಿಲ್ಲಿಯ । ದನ್ಯಕರ್ಮ
ಸುಕರ್ಮವೆಲ್ಲವು । ನಿನ್ನದೆಂದೊಪ್ಪಿಸಿದೆ ರಕ್ಷಿಸು ॥೬೯॥

ಒಡೆಯ ನೀನೆಂದರಿತು ನಾನಿಂ । ಮಡಿಯ ಭಜಿಸದೆ ದುರು
ಳನಾದೆನು । ಮಡದಿ ಮಕ್ಕಳ ಮೋಹದಲಿ ಮನಸಿಲುಕುತ
ಡಿಗಡಿಗೆ ॥ ಮಡದಿಯಾರೀ ಮಕ್ಕಳಾರೀ ಒಡಲಿಗೊಡೆಯ
ನು ನೀನು ನೀಕ್ಕೈ । ವಿಡಿದು ಮುದದಲಿ ಬಿಡದೆ ರಕ್ಷಿಸು ನಮ್ಮ
ನನವರತ ... ... ॥೭೦॥

ಪೆಂಟಸಿದ ಮದ ಮುಖರು ಕೆಲಕೆಲ । ರುಂಟು ರಿಪುಗಳುದ
ಟ್ಟಿಸುತೆ ಬಲು । ಕಂಟಕದಿ ಕಾಡುವರು ಕಾಯ್ವೈ ಕಲುಷಸಂ
ಹಾರ ॥ ಬಂಟನಲ್ಲವೆ ನಾನು ದೀನರ । ನೆಂಟನಲ್ಲವೆ ನೀ ನುನಿ
ನೊನ್ನಳ । ಗುಂಟನಿರ್ದಯನೋಡಿ ರಕ್ಷಿಸು ನಮ್ಮ ॥೭೧॥

ದಂಡಧರನು ಪಟಳದಿ ಮಿಗೆ ಮುಂ । ಕೊಂಡ ಮೊರೆಯೊ
ಗುವವರ ಕಾಣೆನು । ಪುಂಡರೀಕೋದ್ಭವನ ಶಿರವನು ಕಡಿ
ದು ತುಂಡಿಸಿದ । ಖಂಡಪರಶು ಪುರುಪ್ರಭೂಮಿಯೆ । ಳಂಡೆ

ಲೆದುತ್ತಿರುಗುವನುನೀನು । ರ್ದಂಡದೇವರದೇವರಕ್ಷಿಸುನ
ಮ್ಮನನವರತ ... ... ॥೨೨॥

ಶಕ್ತಿಯೆಂಬುದುಮಾಯೆಮಾಯಾ । ಶಕ್ತಿಯದುತನು
ವಿನಲಿನೀನಿಜ । ಮುಕ್ತಿದಾಯಕನಿರಲುಸುಖದುಃಖಾದಿಗಳಿ
ಗಾರು ॥ ಯುಕ್ತಿಯೊಳಗಿದನರಿತುಮನದವಿ । ರಕ್ತಿಯಲಿ
ಭಜಿಸುವಗೆಮುಕ್ತಿಗೆ । ಭಕ್ತಿಯೇಕಾರಣವುರಕ್ಷಿಸುನಮ್ಮ
ನನವರತ ... ... ॥೨೩॥

ಮೂರುಗುಣವೊಳಿದೋರಿತದರೊಳು । ಮೂರು
ಮೂರ್ತಿಗಳಾಗಿರಂಜಿಸಿ । ತೋರಿಸೃಷ್ಟಿಸ್ಥಿತಿಲಯಂಗಳರ
ಚಿಸಿವಿಲಯದಲಿ ॥ ಮೂರುರೂಪೊಂದಾಗಿಪ್ರಳಯದ । ವಾ
ರಿಯಲಿವಟಪತ್ರಶಯನದಿ । ಸೇರಿದವನೀನೀಗರಕ್ಷಿಸುನ
ಮ್ಮನನವರತ ... ... ॥೨೪॥

ನೀರಮೇಲಣಗುಳ್ಳೆಯಂದದಿ । ತೋರಿಯಡಗುವದೇ
ಹವೀಸಂ।ಸಾರಬಹುಳಾರ್ಣವದೊಳಗೆಮುಳುಗಿದೆನುಪತಿ
ಕರಿಸಿ॥ತೋರಿಸಚಿದಾನಂದಪದವಿಯು।ಸೇರಿಸಕಟಾನಿನ್ನ
ವ್ರೋಲ್ಲನು । ಗಾರುಬಾಂಧವರುಂಟುರಕ್ಷಿಸುನಮ್ಮ॥೨೫॥

ಹೊದ್ದಿನಿಲುವುದೆದರ್ಪಣದಮೇ । ಲುದ್ದುರುಳಿಬೀಳ್ವಂ
ತೆನಿಮಿಷದಿ । ಬಿದ್ದುಹೋಗುವಕಾಯವೀತನುವೆಂಬಪಾ
ಶದಲಿ ॥ ಬದ್ಧನಾದೆನುಮಮತೆಯಲಿನೀ । ನಿರ್ದಯಕೆಫಲ
ವೇನುಭಕ್ತಿವಿ । ರುದ್ಧವಾಗದವ್ರೋಲುರಕ್ಷಿಸುನಮ್ಮ॥೨೬॥

ಕೇಳುವದುಕಡುಕಷ್ಟಕಷ್ಟದ । ಬಾಳುವೆಯಬದುಕೇನು

ಸುಡುಸುಡು| ಗಾಳಿಗೊಡ್ಡಿದಸೊಡರುಯಿೂಸಂಸಾರದೇಳಿ
ಗೆಯು || ಬಾಳಬೇಕೆಂಬವಗೆನೆರೆನಿಂ | ಮೂಳಿಗವಮಿಂಗೆ
ಮಾಡಿಭಕ್ತಿಯೊಳಾಳಿಬದುಕುವದುಚಿತರಕ್ಷಿಸು ||೭೭||
ದೇಹಧಾರಕನಾಗಿಬಹುವಿಧ | ಚೋಹದೇಳಿಗೆಯಾ
ಗಿಮುಕುತಿಗೆ | ಬಾಹಿರನುತಾನಾಗಿವಿಷಯಾದಿಗಳಿಗೊಳ
ಗಾಗಿ || ದೇಹವೀಸಂಸಾರವೆನ್ನದೆ | ಮೋಹಿಸುವಮತ್ತ
ಗೇಡಿಮಾನವ | ಸಾಹಸಿಯೆಸಟಮಾತುರಕ್ಷಿಸು ||೭೮||
ಅಳಿವೆಬಡಲನುನೆಚ್ಚಿವಿಷಯಂ | ಗಳಿಗೆಕಾತರನಾಗಿಮಿಂಗೆ
ಕಳೆ | ವಳಿಸಿಕಾಲನಬಳಿಗೆಹಂಗಿಗನಾಗಿಬಾಳುವರೆ || ತಿಳಿ
ದುಮನದೊಳುನಿನ್ನನಾಮಾ | ವಳಿಯಜಂಹೆಗೆತಂದುಪಾ
ಪವ | ಕಳೆದುಬಿಡುವದೆಲೇಸು ರಕ್ಷಿಸುನಮ್ಮನನವರತ||
ವರುಷನೂರಾಯುಷ್ಯವದರೊಳ | ಗಿರುಳುಕಳೆದೈವ
ತ್ತನೈವ | ತ್ತರಲಿವಾರ್ಧಿಕಬಾಲ್ಯಕಾಮಾರದಲಿಮೂವ
ತ್ತು || ಇರದೆಸಂದುದುಬಳಿಕಇಪ್ಪ | ತ್ತೊರುಷವದರೊ
ಳಗಾದುದಂತಃ|ಕರಣನಿನ್ನೊಳುತೋರಿರಕ್ಷಿಸುನಮ್ಮ||
ಊರುತನಗೊಂದಿಲ್ಲಹೊತ್ತಶ | ರೀರಗಳುಮಿತ್ರಯಿಲ್ಲ
ತಾಸಂ | ಚಾರಿಸದನೆಲವಿಲ್ಲನುಡಿಯದಭಾಷೆಮತ್ತಿಲ್ಲ||ಬೇ
ರೆಹೊಸತೊಂದಿಲ್ಲವೃಣ್ಣದ | ಸಾರವಸ್ತುಗಳಿಲ್ಲತನುಸಂ|
ಚಾರವೀಬಗೆಯಾಯ್ತುರಕ್ಷಿಸುನಮ್ಮನನವರತ ||೮೧||
ಗೋಪುರದಭಾರವನುಗಾರೆಯ | ರೂಪುಬೋರಿದ ಪ್ರ
ತಿಮೆಯಂದದಿ | ಈಪರಿಯಸಂಸಾರಭಾರವನಾರುತಾಳು
ವರು || ತಾಪಸಾಕ್ರಮಿಯುಂದುಮನುಜನು | ಕಾಪಥವನೈ

ದುವನುವಿಶ್ವ । ವ್ಯಾಪಕನುನೀನಹುದು ರಕ್ಷಿಸು ॥೮೨॥
ಬೀಜವೃಕ್ಷದೊಳಾಯ್ತು ವೃಕ್ಷಕೆ । ಬೀಜವಾರಿಂದಾಯ್ತುಲೋಕದಿ । ಬೀಜವೃಕ್ಷನ್ಯಾಯವಿದಭೇದಿಸುವರಾರಿನ್ನು ॥ ಸೋಜಿಗವನೀಬಲ್ಲೆನಿಂನೊಳು । ರಾಜಿಸುತವೊಳಿದೋರುವದುಸುರ । ರಾಜನಂದನನವಿತ ರಕ್ಷಿಸು
ತೊಗಲುಬೊಂಬೆಗಳಂತೆನಾಲಕು । ಬಗೆಯನಿರ್ಮಾಣದಲಿಇದರೊಳು । ನೆಗಳದೀ ಚೌಷಷ್ಟಿ ಲಕ್ಷಣ ಜಾತಿಧರ್ಮದಲಿ ॥ ಬಗೆಬಗೆಯನಾಮಾಂಕಿತದಜೀ । ವಿಗಳದೆಲ್ಲವುನಿನ್ನಸಾಮದಿ । ಜಗಕೆತೋರುತ್ತಿಹುದುರಕ್ಷಿಸು ॥೮೪॥
ಹೊಡಿದೆಲುಮರಮುಟ್ಟುಮಾಂಸದ । ಗೋಡೆಚರ್ಮದಹೊದಿಕೆನರವಿನ । ಕೂಡ ಹಿಂಡಿಗೆಬಿಗಿದಮನೆಯೊಳಗಾತ್ಮನಿರುತಿರಲು ॥ ಬೀಡುತೊಲಗಿದಬಳಿಕ ಲಾಸುಡುಗಾಡಿನಲಿಬೇದಿರುವಕೊಂಪೆಯ । ನೋಡಿನಂಬಿರಬಹುದೆರಕ್ಷಿಸು
ಬೀಗಮುದ್ರೆಗಳಿಲ್ಲದೂರಿಗೆ । ಬಾಗಿಲುಗಳೊಂಬತ್ತುಹಗಲಿರು । ಳಾಗಿಮುಚ್ಚದೆತೆರದಿಹುದುಜೀವಾತ್ಮತಾನಿರುತ ॥ ನೀಗಿಯಲ್ಲವಬಿಸುಟುಬೇಗದಿ । ಹೋಗುತಿಹ ಸಮಯದಲಿಇವರವ । ರಾಗಬಲ್ಲರೆನೀನೆರಕ್ಷಿಸುನಮ್ಮನನವ ॥೮೬॥
ಕೀಲುಬಳಿದಿಹದೈದುತಿರುಗುವ । ಗಾಲಿಯೆರಡರರಥದಿಯಾಗುಣ । ಶೀಲನೋರ್ವನುಸಂಚರಿಸುತಿಹನಾರಥಾಗ್ರದಲಿ ॥ ಕೀಲುಕಡೆಗೊಂದೂಡಿಬೀಳಲು । ಕಾಲಗತಿತಪ್ಪುವದುಅದರನು । ಕೂಲನಿನ್ನೊಳಗಿಹುದುರಕ್ಷಿಸು ॥೮೭॥
ಬಿಗಿದರಕುತದರೋಮಕೂಪದ । ತೊಗಲಕೋಟೆ

ಯನಂಬಿರೋಗಾ। ದಿಗಳಮುತ್ತಿಗೆಬಲಿದುಜೀವನಪಿಡಿಯು
ಲನುವಾಯ್ತು ॥ ವಿಗಡಯಮನಾಳುಗಳುಬರುತ್ತಿರೆ । ತೆಗ
ಸುಕಾಲನಬಲವಬಲವು । ತ್ತಿಗೆಯನಿದಪರಿಹರಿಸಿರಕ್ಷಿಸು

ವಾರಣಗಳೆಂಟೆಸೆವನಗರಕೆ। ದ್ವಾರವೊಂಬತ್ತದಕೆಬಲು
ಮೊನೆ । ಗಾರರಾದಾಳುಗಳಕಾವಲುಗಾರರನುಮಾಡಿ ॥ ಆ
ರರಿಯದಂತದರೊಳಗೆಹೃದ। ಯಾರವಿಂದದಿನೀನಿರಲುಬ
ರಿ। ದೂರುಜೀವನಿಗುಂಟೆರಕ್ಷಿಸುನಮ್ಮನನವರತ ॥೨೯॥

ಪೇಳಲೆಂನಳವಲ್ಲವೀಗೆಮ। ನಾಳುಗಳುನೆರೆಯಂಗದೇಶ
ವ। ಧಾಳಿಮಾಡುವರಕಟಕಟ ಸೆರೆಸೂರೆಗಳಪಿಡಿದು ॥ ಕಾ
ಳುಮಾಡುವರಿನ್ನು ತನುವಿದು। ಬಾಳಲರಿಯದು ಕೊಟೆ
ಯವರಿಗೆ। ಕೋಳುಹೋಗದಮುನ್ನರಕ್ಷಿಸು ॥೩೦॥

ನಾಲಿಗೆಯುನಾಸಿಕವುನಯನಕ।.ಪಾಲಪದಪಾಣಿಗಳು
ತನುವಿನ। ಮೂಲಗರ್ಭವಿನಲ್ಲಿಪರಿಚಾರಕರುತಾವಾಗಿ ॥
ಲೀಲೆಯಿಂದಿರುತ್ತಿ ದರ್ಕಡೆಯಲಿ। ಕಾಲತೀರಿದಬಳಿಕಲ
ದರನು। ಕೂಲನಿನ್ನೊಳಗಹುದುರಕ್ಷಿಸುನಮ್ಮ ॥೩೧॥

ಸತ್ತವರಿಗಳಲೇಕೆತನ್ನನು। ಹೊತ್ತವರುಹೆತ್ತವರುಗಳು
ತಾ। ಸತ್ತುಹೋಗುವರಲ್ಲದುಳಿವರೆ ಮರುಗಲೇಕಿನ್ನು॥
ಮೃತ್ಯುಬೆನ್ನಿನೊಳಿಹುದುತಾವಿಂ। ನತ್ತು ಮಾಡುವ
ದೇನುಪೂರ್ವದ। ತೆತ್ತಿಗನುನೀನೀಗರಕ್ಷಿಸುನಮ್ಮ ॥೩೨॥

ಮಣ್ಣಮಣ್ಣನೊಳುದಿಸಲದರಲಿ। ಮಣ್ಣಬೊಂಬೆಗ
ಳಾಗಿರಂಜಿಸಿ। ಮಣ್ಣನಾಹಾರದಲಿಜೀವವಹೊರದು ಉಪ
ಚರಿಸಿ ॥ ಮಣ್ಣನಲಿಬಂಧಿಸಿದದೇಹವ । ಮಣ್ಣಕೂಡಿಸ

ಬೇಡಜ್ಞಾನದ | ಕಣ್ಣದೃಷ್ಟಿಯನಿತ್ಯರಕ್ಷಿಸುನಮ್ಮ ॥೯೩॥

ಬೀಯವಾಗುವತನುವಿನಲಿನಿ | ರ್ದಾಯಕನುನೀನಿರ್ದುಅತ್ರಿಹರಿ | ದಾಯಸಂಬಡಿಸುವರೆನೀನನುಕೂಲವಾಗಿರ್ದು ॥ ತಾಯನಗಲಿದಶಿಶುವಿನಂದದಿ | ಬಾಯಬಿಡುವೆಂತಾಯ್ತ್ರಲೋಕೆಂ | ತಾಯಕನೆಬಿಡಬೇಡರಕ್ಷಿಸು ॥೯೪॥

ಮೊದಲುಜನನವನರಿಯೆಮರಣದ | ಹದನಕಡೆಯಲಿತಿಳಿಯೆಸಾಮಧ್ಯದಲಿನೆರೆನಾನಿಪುಣನೆಂಬುದುಬಳಿಕನಗೆಗೇಡು ॥ ಮೊದಲುಕಡೆಮಧ್ಯಗಳಬಲ್ಲವ | ಮದನಜನಕನುನೀನುನಿನ್ನಯ | ಪದಯುಗವಬಯಸುವೆನುರಕ್ಷಿಸುನಮ್ಮನನವರತ ... ... ॥೯೫॥

ಸಾರವಿಲ್ಲದದೇಹವಿದು | ಸಾಪ್ಪರವಾಗಿಹತನುವಿನಲಿಸಂ | ಚಾರಿಯಹನೀನಿರ್ದುಕಡೆಯಲಿತೊಗಿಲಹೋಗುತಲಿ ॥ ದೂರತಪ್ಪಿಸಿಕೊಂಡುಬರಿಯಪ | ದೂರಹೊರಿಸಿದೆಜೀವನಲಿಯಿದ್ದುನಾರುಮೆಚ್ಚುವರಕಟರಕ್ಷಿಸು ॥೯೬॥

ಅಂಡವೆರಡುದ್ಭವಿಸಿದವುಬ್ರ | ಹ್ಮಾಂಡವದರೊಳಪಾದಿಯಲಿಪಿಂ | ಡಾಂಡವೆಸೆದುದುಸ್ಥೂಲಕಾರಣಸೂಕ್ಷ್ಮತನುವಿನಲಿ ॥ ಅಂಡನಿನ್ನಯರೋಮಕೂಪದೊ | ಳಂಡಲೆದವಖಿಲಾಂಡವಿದುಬ್ರ | ಹ್ಮಾಂಡನಾಯಕನೀನುರಕ್ಷಿಸು ॥

ಒಂದುದಿನತನುವಿನಲಿನಡೆವವು | ಇಂದುಭಾಸ್ಕರಸ್ವರಗಳಿಪ್ಪ | ತ್ತೊಂದುಸಾವಿರದಾರನೂರನುಏಳುಭಾಗದಲಿ ॥ ಬಂದುದನುವೃಡುಚಕ್ರದಲ್ಲಿಗೆ | ತಂದುಧಾರೆಯನೆರದಮುನಿಕುಲ | ಬೃಂದಹೃದಯನುನೀನುರಕ್ಷಿಸುನಮ್ಮ ॥೯೮॥

ತೊಲಗುವರುಕಡೆಕಡೆಗೆತಾಹೊಲೆ|ಹೊಲೆಯನುತಕ
ಳವಳಿಸಿವಮೂತ್ರದ | ಬಿಲದೊಳಗೆಬಂದಿಹದಕಾಣದೆ ಬರಿದೆ
ಮನನೊಂದು||ಜಲದೊಳಗೆಮುಳಗಿದರೆತೊಲಗದು|ಹೊ
ಲೆಗೆಲಸವೀದೇಹದೊಳುನೀ | ನೆಲಸಿರಲುಹೊಲೆಯುಂಟೆ
ರಕ್ಷಿಸುನಮ್ಮನನವರತ ... ... ||೯೯||

ಬರಿದೆಹಂಕಾರದಲಿತತ್ವದ|ಕುರುಹಕಾಣದೆನಿನ್ನದಾ
ಸರ | ಜರೆದುವೇದಪುರಾಣಶಾಸ್ತ್ರಗಳೋದಿಫಲವೇನು ||
ನರರುದುಷ್ಕರ್ಮದಲಿಮಾಡಿದ | ದುರಿತವಡಗಲುನಿನ್ನ
ನಾಮ | ಸ್ಮರಣೆಯೊಂದೇಸಾಕುರಕ್ಷಿಸು ನಮ್ಮ||೧೦೦||

ಎಂಜಲೆಂಜಲುಯೆಂಬರಾನುಡಿ | ಯೆಂಜಲಲ್ಲವೆವಾರಿಜ
ಲಚರ | ದೆಂಜಲಲ್ಲವೆಹಾಲುಕರುವಿನಎಂಜಲೆನ್ನಿಸದೆ || ಎಂ
ಜಲೆಲ್ಲಿಯದೆಲ್ಲಿಯುಂಪರ | ರೆಂಜಲಲ್ಲದೆಬೇರೆಭಾವಿಸ | ಲೆಂ
ಜಲುಂಟೇದೇವರಕ್ಷಿಸು ನಮ್ಮನನವರತ ||೧೦೧||

ಕೇಳುವದು ಹರಿಕಥೆಯುಕೇಳಲು | ಹೇಳುವದುಹರಿ
ಭಕ್ತಿಮನದಲಿ | ತಾಳುವದುಹರಿದಾಗಿನಿನ್ನಯಚರಣಸೇ
ವೆಯಲಿ||ಊಳಿಗವಮಾಡುವದುವಿಷಯವ|ಹೂಳುವದು
ನಿಜಮುಕ್ತಿಕಾಂತೆಯ|ನಾಳುವದುಕೃಪೆಮಾಡಿರಕ್ಷಿಸು||

ಈತೆರದೊಳಚ್ಯುತನನಾಮವ | ನೂತನದಿವಸುಧಾ
ತಳದಿವಿ|ಖ್ಯಾತಿಯಲಿಬಣ್ಣಿಸಿದಕನ್ನಡಕುಸುಮಷಟ್ಪದಿ
ಯ||ನೀತಿಕೋವಿದರಾಲಿಸುವದತಿ|ಪ್ರೀತಿಯಲಿ ಕೇಳ್ದರಿಗೆ
ಅಸುರಾ|ರಾತಿಚೆನ್ನಿಗರಾಯಸುಖಗಳನೀವನನವರತ||

ಬಾದರಾಯಣಪೇಳ್ದಭಾರತ|ಕಾದಿಕರ್ತನುವಾರಶ್ರೀಪು

ರ|ದಾದಿಕೇಶವಮೂರ್ತಿಗಂಕಿತವಾದಚರಿತೆಯನು|| ಮೋ
ದಿನಿಯೊಳಿದನಾರು ಹೃದಯದೊ | ಳಾದರಿಸಿಕೇಳ್ವರೊ
ಮುದದಲಿ|ಆದಿಮೂರುತಿ ಸುರವರಾಧಿಪನೊಲಿವೀಕ್ಷಿಸುವ

ಕುಲಗಿರಿಗಳನ್ವಯವುಧಾರುಣಿ | ಜಲಧಿಪಾವಕಮರು
ತಜಲನಭ | ಜಲಜಸಖಶೀತಾಂಶುತಾರೆಗಳುಳ್ಳಪರಿಯಂತ||
ಚಲನೆಯಿಲ್ಲದನಿನ್ನ ಚರಿತೆಯು | ಒಲಿದು ಧರೆಯೊಳಗೊ
ಪ್ಪುವಂದದಿ| ಚಲುವ ಚೆನ್ನಿಗರಾಯ ರಕ್ಷಿಸು ||೧೦೫||

ನೂರುಕನ್ಯಾದಾನವನುಭಾ | ಗೀರಥೀಸ್ನಾನವನುಮಿ
ಗೆಕೈ|ಯೂರೆಗೋವ್‌ಗಳ ಪ್ರೇಮದಿಂದಲಿಭೂಸುರರಿಗೊ
ಲಿದು || ಊರುಗಳನೂರಗ್ರಹಾರವ | ಧಾರೆಯೆರದಿತ್ತಂತೆ
ಫಲಕೈ | ಸೇರುವದುಹರಿಭಕ್ತಿಸಾರದಕಥೆಯಕೇಳ್ದರಿಗೆ||

ಮೇರುಮಂದರನಿಭಸುವರ್ಣವ| ವಾರಿಮಧ್ಯದೊಳಿರು
ವಅವನಿಯು | ನಾರಿಯುರಗಾಯತ್ರಿಪಶುಗಳನಿತ್ತಫಲವಹು
ದು | ಧಾರುಣಿಯೊಳೀಭಕ್ತಿಸಾರವ | ನಾರುಓದುವರವರಿ
ಗನುದಿನ|ಚಾರುತರಗಳನಿತ್ತುರಕ್ಷಿಪನಾದಿಕೇಶವನು||೧೦೬

ಲೋಕದೊಳಗತ್ಯಧಿಕವೆನಿಸುವ|ಕಾಗಿನೆಲೆಸಿರಿಯಾದಿ
ಕೇಶವ| ತಾಕೃಪೆಯೊಳಗೆನುಡಿಸಿದನುಈಭಕ್ತಿಸಾರವನು||
ಜೋಕೆಯಲಿಬರದೋದಿಕೇಳ್ವರ | ನಾಕುಲದಿಮಾಧವನು
ಕರುಣಿಪ|ಶ್ರೀಕಮಲೆವಲ್ಲಭನುಮಿಗೆಬಡವಾದಿಕೇಶವನು||

ಇಂತುಪದ್ಯಗಳುನೂರೆಂಟಕ್ಕೆ ಮಂಗಳಮಸ್ತು.

ಕನಕದಾಸವಿರಚಿತ ಹರಿಭಕ್ತಿಸಾರಸಂಪೂರ್ಣಂ.

ಸಂಬು, ತ. (ನಾ) ಶಂಭು.
ನೋ.

ಸಂಭವ, ಸಂ. (ನಾ) ಹುಟ್ಟುವದು, ಆಗುವದು.

ಸಂಭಲಿ, ಸಂ. (ನಾ) ಕುಂಟಣಗಿತ್ತಿ.

ಸಂಭಾವನೆ, ಸಂ. (ನಾ) ಮಾನ ಮಾಡೋಣ.

ಸಂಭಾವಿಸು, ಸಂ. (ಕ್ರಿ) ಮಾನ ಮಾಡು.

ಸಂಭೂತ, ಸಂ. (ವಿ) ಹುಟ್ಟಿದ.

ಕಾಲ.

ಸಂವರ್ತಕ, ಸಂ. (ನಾ) ಬಲರಾಮ. ೨ ಅವನನೇಗಿಲು.

ಸಂವರ್ತಾಭ್ರ, ಸಂ. (ನಾ) ಪ್ರಳಯಕಾಲದಮೋಡ.

ಸಂವರ್ತಿಕೆ, ಸಂ. (ನಾ) ಕಮಲದನೂತನವಾದಎಲೆ.

ಸಂವರ್ಧಿತ, ಸಂ. (ವಿ) ಮೇರೆದಪ್ಪಿದ, ಬಹಳ ಹೆಚ್ಚಾದ.

ಸಂವಸಥ, ಸಂ. (ನಾ) ಊರು.

ಸಂವಾಹನ, ಸಂ. (ನಾ) ಶರೀರ. ೨ ಮೈತಿಕ್ಕೋಣ.

3.90

3.90

Haribhaktisaravu, Native poem on Vishnu, Canarese.

ಶ್ರೀರಸ್ತು.

ಜಯಕೃಷ್ಣಭಗವನ್

ಶ್ರೀಮದ್ರಮಾರಮಣ ಚರಣ ಸ್ಮರಣ ಪ್ರವಣಪರಿ
ಪೂತಾಂತಃಕರಣರಾದ
ಕನಕದಾಸರೆಂಬ ಭಗವತರಿಂ
ವಿರಚಿತಮಾಗಿರ್ಪ

ಹರಿಭಕ್ತಿಸಾರವು

ಎರಡನೆ ಛಾಪೆ, ಪ್ರತಿ, ೨೦೦೦

BANGALORE:
PRINTEDBY H. NARASIMMIAH, AT THE
VICHARA, DURPANA PRESS,
1869.